# ನಗೆಗಾರನಷ್ಟೇ ಅಲ್ಲ, ನನ್ನೊಳಗೊಬ್ಬ ಸಂಕಲನಕಾರನೂ ಇದ್ದಾನೆ...

**ಕನ್ನಡ ಚಿತ್ರರಂಗದಲ್ಲಿ ಹಾಸ್ಯ ನಟನಾಗಿ ಹೆಸರು ಮಾಡಿರುವ ನಟ ಕೋಮಲ್, ಇದೀಗ ಮತ್ತಷ್ಟು ಕನಸುಗಳೊಂದಿಗೆ ಮರಳಿದ್ದಾರೆ. ಹೊಸತನದೊಂದಿಗೆ ತಮ್ಮನ್ನು ತಾವು ನಿರೂಪಿಸಿಕೊಳ್ಳುವ ಪ್ರಯತ್ನ ಅವರದ್ದು.**

**■ ಸುಮಲತಾ ಎನ್.**




ಒಮ್ಮೆ ರಾಜ ಅಕ್ಬರ್ ಕಾಡಿಗೆ ಹೋಗಿದ್ದಾಗ ಅವನಿಗೆ ತುಂಬಾ ಹಸಿವಾಯಿತು. ಅಲ್ಲೇ ಕಾಡಂಚಿನ ಹಳ್ಳಿಯೊಂದರಲ್ಲಿದ್ದ ಅಜ್ಜಿಯೊಬ್ಬಳ ಮನೆಗೆ ಹೋದ ರಾಜನಿಗೆ ಹಸಿವು ನೀಗಿಸಿಕೊಳ್ಳಲು ಸಿಕ್ಕಿದ್ದು ಚಪಾತಿ. ಹಸಿವಿನಿಂದ, ಬಿಸಿಬಿಸಿ ಚಪಾತಿಯನ್ನು ಲಗುಬಗೆಯಾಗಿ ಮುರಿಯಲು ಹೋಗಿ ಬೆರಳು ಸುಟ್ಟುಕೊಂಡ ರಾಜನನ್ನು ನೋಡಿದ ಅಜ್ಜಿ, 'ಮೊದಲು ಅಂಚಿನಿಂದ ತಿನ್ನುತ್ತಾ ಬಾ, ಮಧ್ಯಕ್ಕೆ ಬರುವಷ್ಟರಲ್ಲಿ ತಣ್ಣಗಾಗಿರುತ್ತದೆ, ಆರಾಮಾಗಿ ತಿನ್ನಬಹುದು' ಎಂದಳು. ಅಜ್ಜಿಯ ಆ ಚಿಕ್ಕ ಸಲಹೆ ರಾಜನಲ್ಲಿ ದೊಡ್ಡ ಆಲೋಚನೆ ತಂದಿತ್ತು. ಆ ಸಲಹೆಯನ್ನೇ ಯುದ್ಧ ಕೌಶಲಕ್ಕೆ ಅನ್ವಯಿಸಿಕೊಂಡ ರಾಜ, ಮೊದಲು ಗಡಿ ಪ್ರದೇಶಗಳನ್ನೆಲ್ಲಾ ವಶಪಡಿಸಿಕೊಳ್ಳುತ್ತಾ, ಕೊನೆಗೆ ಸುಲಭವಾಗಿ ರಾಜಧಾನಿಯನ್ನೂ ಗೆದ್ದುಕೊಂಡ...

ನಟ ಕೋಮಲ್, ಈ ಕಥೆಗೆ ತಮ್ಮ ಸಿನಿಮಾ ಬದುಕನ್ನೂ ಅನ್ವಯಿಸಿಕೊಂಡಿರುವುದಾಗಿ ಹೇಳಿದರು.

'ನನ್ನ ತಾಯಿ ಹೇಳುತ್ತಿದ್ದ ಈ ಕಥೆ, ನನ್ನ ಆಲೋಚನೆಯನ್ನೂ ಬದಲಿಸಿತು. ಹೀರೊ ಮಾತ್ರ ಆಗಬೇಕೆಂದುಕೊಳ್ಳದೆ, 'ಕ್ಯಾರೆಕ್ಟರ್ ಆರ್ಟಿಸ್ಟ್' ಆಗಿ, ಬೇರೆ ಬೇರೆ ರೀತಿಯ ಪಾತ್ರಗಳ ಮೂಲಕ ನನ್ನನ್ನು ಬೆಳೆಸಿಕೊಳ್ಳುತ್ತಾ, ಮತ್ತೆ ಹೀರೊ ಆಗಿ ಗಟ್ಟಿಯಾಗಿ ನಿಲ್ಲಬಹುದಲ್ವಾ ಅನ್ನುವ ಆಲೋಚನೆ ಚಿತ್ರರಂಗದಲ್ಲಿ ನನ್ನ ಪಯಣಕ್ಕೆ ಕಾರಣವಾಯಿತು' ಎಂದು ಆ ಕಥೆಯ ಉದಾಹರಣೆ ನೀಡಿದರು.

ಸುಮಾರು ಐದು ವರ್ಷಗಳ ಕಾಲ ಚಿತ್ರರಂಗದಿಂದ ಬ್ರೇಕ್ ತೆಗೆದುಕೊಂಡಿದ್ದ ನಟ ಕೋಮಲ್, ತಾವು ಎಲ್ಲಾ ರೀತಿಯಿಂದಲೂ 'ಫಿಟ್' ಆಗಿ ಮರಳಿರುವುದಾಗಿ ಹೇಳುತ್ತಾರೆ. ಸದ್ಯ 7 ಸಿನಿಮಾಗಳ ಚಿತ್ರೀಕರಣದಲ್ಲಿ ಬಿಜಿಯಾಗಿದ್ದಾರೆ. 'ಕಾಲಾಯ ನಮಃ', 'ನಮೋ ಭೂತಾತ್ಮ 2', 'ರೋಲೆಕ್ಸ್', 'ಎಲಾ ಕುನ್ನಿ ಮೇರಾ ನಾಮ್ ವಜ್ರಮುನಿ' ಚಿತ್ರೀಕರಣ ನಡೆಯುತ್ತಿದ್ದು, ಇನ್ನೂ ಕೆಲ ಸಿನಿಮಾಗಳು ಬಾಕಿ ಇವೆ. ಎರಡು ಸಿನಿಮಾಗಳ ಚಿತ್ರೀಕರಣ ಮುಗಿದಿದೆ.

ಕೋಮಲ್ ಅವರಲ್ಲಿ ಸಿನಿಮಾಗಳ ಬಗ್ಗೆ ಹಿಂದಿಗಿಂತಲೂ ಹೆಚ್ಚಿನ ಹುಮ್ಮಸ್ಸು ತುಂಬಿದೆ. ಈ ಕೆಲ ವರ್ಷಗಳಲ್ಲಿ ಕನ್ನಡ ಚಿತ್ರರಂಗ ಕಂಡಿರುವ ಎಕ್ಸ್‌ಪೋಷರ್, ಬದಲಾವಣೆಗಳನ್ನು ಗಣನೆಗೆ ತೆಗೆದುಕೊಂಡಿರುವ ಅವರು ಹೊಸ ಪ್ರಯೋಗಗಳ ನಿರೀಕ್ಷೆಯಲ್ಲಿದ್ದಾರೆ.

'ಕೆಲ ವರ್ಷಗಳಿಂದೀಚೆಗೆ ಕನ್ನಡ ಚಿತ್ರರಂಗ ಸಾಕಷ್ಟು ಎಕ್ಸ್‌ಪೋಷರ್ ಪಡೆದುಕೊಂಡಿದೆ. ಜನರು ಭಾಷೆಯ ಹಂಗಿಲ್ಲದೇ ಸಬ್ ಟೈಟಲ್‌ಗಳ ನೆರವಿನಿಂದ ಸಿನಿಮಾಗಳನ್ನು